**ಅಸಲು ದಾವ ಸಂಖ್ಯೆಃ 463/2018**
**ಪಿ.ಡಬ್ಲೂ -1**

ದಿಃ 23-08-2022 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಭೋಧಿಸಲಾಯಿತು.
**ಮುಂದುವರೆದ ಪಾಟೀ ಸವಾಲು ಶ್ರೀ V.B.M. ರವರಿಂದಃ-**

(ಸಾಕ್ಷಿಗೆ ಕನ್ನಡ ಭಾಷೆ ಬರುವುದಿಲ್ಲ ಎಂದು ವಕೀಲರು ಹೇಳಿದ ಕಾರಣ ಹಿಂದಿ (ಮರಾಠಿ) ಭಾಷೆ ಮತ್ತು ಕನ್ನಡ ಭಾಷೆ ತಿಳಿದಿದೆ ಎಂದು ಹೇಳಿರುವ ವಕೀಲರಾದ ಶ್ರೀ ಡಿ ಬಿ ಜಿ ರವರನ್ನು ತರ್ಜುಮೆದಾರರಾಗಿ ನೇಮಕ ಮಾಡಿದ್ದು ಸದರಿಯವರು ವಾದಿಯ ಪರ ವಕೀಲರು ಕನ್ನಡದಲ್ಲಿ ಕೇಳಿದ ಪ್ರಶ್ನೆಗಳನ್ನು ಮರಾಠಿಗೆ ತರ್ಜುಮೆ ಮಾಡಿ ಸಾಕ್ಷಿಗೆ ಹೇಳಲು, ಸಾಕ್ಷಿಯು ಮರಾಠಿಯಲ್ಲಿ ಹೇಳಿದ ಉತ್ತರವನ್ನು ಕನ್ನಡಕ್ಕೆ ತರ್ಜುಮೆ ಮಾಡಿ ಹೇಳಲು ಒಪ್ಪಿಕೊಂಡಿರುತ್ತಾರೆ. ರೂ.200/- ನ್ನು ತರ್ಜುಮೆದಾರರ ಫೀ ಎಂದು ನಿಗದಿಪಡಿಸಿದ್ದು ವಾದಿಯು ಸದರಿ ಫೀಯನ್ನು ನೀಡಲು ಆದೇಶಿಸಲಾಗಿದೆ.)

1. ಭಾಗಿರೇಥಿ ರವರು ನನ್ನ ಅಜ್ಜನಿಗೆ ಭಕ್ಷಿಸ ಮಾಡಿದ ಆಸ್ತಿಗಳೆಂದರೆ 1 ಮನೆ, ಸರ್ವೇ ನಂಬರ 22/2, 439/3/2 ಹಾಗೂ 319/4 ಆಗಿರುತ್ತವೆ ಎಂದರೆ ಸರಿ. ನಾನು ಪ್ರತಿವಾದಿಯರು ಈ ಪ್ರಕರಣದಲ್ಲಿ ಹಾಜರುಪಡಿಸಿದ ದಾಖಲೆಗಳನ್ನು ನೋಡಿರುತ್ತೇನೆ. ಸದರಿಯವರು ಹಾಜರುಪಡಿಸಿರುವ ದಾಖಲೆಗಳು ಖೊಟ್ಟಿ ಇರುತ್ತವೆ. ಸದರಿ ದಾಖಲೆಗಳು ಖೊಟ್ಟಿ ಇವೆ ಎಂದು ತೋರಿಸಲು ನನ್ನ ಬಳಿ ಯಾವುದೇ ದಾಖಲಾತಿ ಇಲ್ಲ. ನಾನು ಸದರಿ ದಾಖಲೆಗಳು ಖೊಟ್ಟಿ ಇವೆ ಎಂದು ಪೊಲೀಸ ಠಾಣೆಯಲ್ಲಿ ಅಥವಾ ನ್ಯಾಯಾಲಯದಲ್ಲಿ ದೂರನ್ನು ದಾಖಲಿಸಿಲ್ಲ, ಆದರೆ ನಾನು ಗ್ರಾಮಪಂಚಾಯತಿಯಲ್ಲಿ ತಕರಾರನ್ನು ಸಲ್ಲಿಸಿರುತ್ತೇನೆ. ಸದರಿ ಆ ರೀತಿ ಗ್ರಾಮಪಂಚಾಯತಿಗೆ ಸಲ್ಲಿಸಿರುವ ತಕರಾರಿನ ದಿನಾಂಕ, ತಿಂಗಳು ಹಾಗೂ ಇಸ್ವಿಯನ್ನು

ಹೇಳಲು ನನಗೆ ಬರುವುದಿಲ್ಲ. ನಾನು ಸದರಿ ತಕರಾರಿನ ಕಚೇರಿ ಪ್ರತಿಯನ್ನು ನ್ಯಾಯಾಲಯದಲ್ಲಿ ಹಾಜರುಪಡಿಸಿರುತ್ತೇನೆ. ನಾನು ಈ ರೀತಿ ದೂರನ್ನು ಗ್ರಾಮಪಂಚಾಯಲ್ಲಿರುವ ಕ್ಲರ್ಕ ರವರಿಗೆ ನೀಡಿರುತ್ತೇನೆ. ಸದರಿ ತಕರಾರನ್ನು ನಾನು ನೀಡಿರುವ ಕುರಿತಾಗಿ ಸ್ವೀಕೃತಿ ಪ್ರತಿ ನನ್ನ ಬಳಿ ಇಲ್ಲ. ನಾನು ಗ್ರಾಮಪಂಚಾಯತಿಗೆ ತಕರಾರು ನೀಡಿದ್ದೇನೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

2. ಪ್ರತಿವಾದಿಯವರು 1982 ರಲ್ಲಿ ದಾವಾ ಆಸ್ತಿಯಲ್ಲಿ ಮನೆಯನ್ನು ಕಟ್ಟಿರುತ್ತಾರೆ ಎಂದರೆ ಸರಿಯಲ್ಲ. ನಾನು ಮುಂದುವರೆದು ಹೇಳುತ್ತೇನೆ ದಾವಾ ಆಸ್ತಿ ಕೃಷಿ ಭೂಮಿ ಇರುತ್ತದೆ.

ಪ್ರಶ್ನೆಃ ದಾವಾ ಆಸ್ತಿ ಕೃಷಿ ಭೂಮಿ ಇದೆ ಹಾಗೂ ಅದರಲ್ಲಿ ಬೆಳೆಗಳು ಬೆಳೆಯುತ್ತವೆ ಎಂದು ತೋರಿಸಲು ನಿಮ್ಮ ಬಳಿ ಯಾವುದಾದರೂ ಸಾಕ್ಷ್ಯ ಇದೆಯೇ?

ಉತ್ತರಃ ದಾವಾ ಆಸ್ತಿಯಲ್ಲಿ ಮೊದಲು ಬೆಳೆ ಬೆಳೆಯುತ್ತಿದ್ದರು ಈಗ ಅದು ಪಡ ಜಮೀನು ಆಗಿರುತ್ತದೆ.

3. 1982 ರಿಂದ ದಾವಾ ಆಸ್ತಿ ಕೃಷಿಯೇತರ ಜಮೀನು ಆಗಿರುತ್ತದೆ ಎಂದರೆ ಸರಿಯಲ್ಲ. 1982 ನೇ ಇಸ್ವಿಯಲ್ಲಿ ಗ್ರಾಮಪಂಚಾಯತಿಯವರು ಪ್ರತಿವಾದಿ ಕಟ್ಟಿರುವ ಕಟ್ಟಡಕ್ಕೆ ಕರಾರಣೆಯನ್ನು ನಿರ್ಧರಿಸಿದ್ದರು ಎಂದರೆ ಸರಿಯಲ್ಲ. ಸದರಿ ಕರಾಕರಣೆ ಕುರಿತಾಗಿ ಠರಾವನ್ನು ದಿನಾಂಕ 12.09.1982 ರಲ್ಲಿ ಮಾಡಿದ್ದರು ಎಂದರೆ ಸರಿಯಲ್ಲ. ನಾನು ಮುಂದುವರೆದು ಹೇಳುತ್ತೇನೆ ದಾವಾ ಜಮೀನಿನಲ್ಲಿ ಯಾವುದೇ ಮನೆ ಇರುವುದಿಲ್ಲ. ನಂತರ ಗ್ರಾಮಪಂಚಾಯತಿನವರು ಮತ್ತೊಂದು ಠರಾವನ್ನು ಮಾಡಿ ಪ್ರತಿವಾದಿಯರು ದಾವಾ

ಆಸ್ತಿಯಲ್ಲಿ ಕಟ್ಟಿರುವ ಪರವಾನಿಗೆ ಇಲ್ಲದ ಕಟ್ಟಡವನ್ನು ಸಕ್ರಮ ಕಟ್ಟಡ ಎಂದು ಮಾಡಿರುತ್ತಾರೆ ಎಂದರೆ ಸರಿಯಲ್ಲ. ಸದರಿ ಈ ರೀತಿ ಠರಾವನ್ನು ದಿನಾಂಕ 19.07.1986 ರಂದು ಮಾಡಿರುತ್ತಾರೆ ಎಂದರೆ ಸರಿಯಲ್ಲ. ಸದರಿ ಈ ರೀತಿ ಠರಾವಿನನ್ವಯ ಸದರಿ ಗ್ರಾಮದ 247 ಮನೆಗಳನ್ನು ಸಕ್ರಮ ಮಾಡಲಾಗಿರುತ್ತದೆ ಎಂದರೆ ಸರಿಯಲ್ಲ. ದಿನಾಂಕ 12.09.1982 ಹಾಗೂ 19.07.1986 ರ ಠರಾವಗಳು ಖೊಟ್ಟಿ ಇರುತ್ತವೆ ಎಂದು ನಾನು ಮೇಲ್ಮನವಿ ಪ್ರಾಧಿಕಾರದಲ್ಲಿ ಪ್ರಶ್ನಿಸಿಲ್ಲ ಆದರೆ ತಲಾಟಿ ರವರಿಗೆ ತಕರಾರನ್ನು ಸಲ್ಲಿಸಿರುತ್ತೇನೆ ಹಾಗೂ ಈ ನ್ಯಾಯಾಲಯದಲ್ಲಿ ಅದನ್ನು ಪ್ರಶ್ನಿಸಿರುತ್ತೇನೆ. ಸದರಿ ಠರಾವಗಳು ಖೊಟ್ಟಿ ಇವೆ ಎಂದು ಈ ನ್ಯಾಯಾಲಯದಲ್ಲಿ ಪ್ರಶ್ನಿಸಿಲ್ಲ ಎಂದರೆ ಸರಿಯಲ್ಲ. ದಾವಾ ಆಸ್ತಿಯಲ್ಲಿ ಪ್ರತಿವಾದಿ 161.90 ಚದರ ಮೀಟರಗಳಷ್ಟು ವಿಸ್ತೀರ್ಣವುಳ್ಳ ಕೆಂಪು ಹಂಚಿನ ಮನೆಯನ್ನು ಕಟ್ಟಿಸಿರುತ್ತಾರೆ ಎಂದರೆ ಸರಿಯಲ್ಲ. ದಾವಾ ಆಸ್ತಿಯ ದಕ್ಷಿಣದ ಗಡಿಯಲ್ಲಿ ಕಾಲುದಾರಿ ಇರುತ್ತದೆ ಎಂದರೆ ಸರಿ. ಸದರಿ ಕಾಲುದಾರಿ ಚಿಕ್ಕದಾಗಿರುವುದರಿಂದ ಅಕ್ಕಪಕ್ಕದ ಜಮೀನದವರು ಸ್ವಲ್ಪ ಸ್ವಲ್ಪ ಜಾಗವನ್ನು ಬಿಟ್ಟಿರುತ್ತಾರೆ ಎಂದರೆ ಸರಿಯಲ್ಲ. ಪ್ರತಿವಾದಿಯು ದಾವಾ ಆಸ್ತಿಯಲ್ಲಿ 387 Sq.ft ಜಾಗವನ್ನು ಕಾಲುದಾರಿ ಸಲುವಾಗಿ ಜಾವನ್ನು ಬಿಟ್ಟಿರುತ್ತಾರೆ ಎಂದರೆ ಸರಿಯಲ್ಲ. ಪ್ರತಿವಾದಿಯರ ಕಬ್ಜಾದಲ್ಲಿ ದಾವಾ ಆಸ್ತಿಯಲ್ಲಿ 5494 sq ft ನಷ್ಟು ಜಾಗ ಇರುತ್ತದೆ ಎಂದರೆ ಸರಿಯಲ್ಲ. ನಾನು ಮುಂದುವರೆದು ಹೇಳುತ್ತೇನೆ ದಾವಾ ಆಸ್ತಿ ನಮ್ಮ ಕಬ್ಜಾದಲ್ಲಿ ಇರುತ್ತದೆ. ಪ್ರತಿವಾದಿಯರ ಮನೆಯ ಪೂರ್ವ ದಿಕ್ಕಿಗೆ ಅವರ ಸಹೋದರ ಮಾನೀಕ ಬರ್ಮಾ ಕಲಪತ್ರೆ ರವರ ಮನೆ ಹಾಗೂ ಖುಲ್ಲಾ ಜಾಗ ಇರುತ್ತದೆ ಎಂದರೆ ಸರಿಯಲ್ಲ. ಮಾನೀಕ ಬರ್ಮಾ ಕಲಪತ್ರೆ ರವರ ಜಾಗದಲ್ಲಿ ಅವರಿಗೆ ಸೇರಿದ ಬಾವಿ ಇರುತ್ತದೆ ಎಂದರೆ ಸರಿ. ಪ್ರತಿವಾದಿಯರ ಮನೆ ಹಾಗೂ ಖುಲ್ಲಾ ಜಾಗದ ಪಶ್ಚಿಮಕ್ಕೆ ನಾರಾಯಣ ಪಾಟೀಲ ರವರ ಮನೆ ಇರುತ್ತದೆ ಎಂದರೆ ಸರಿಯಲ್ಲ. ನಾನು ಮುಂದುವರೆದು ಹೇಳುತ್ತೇನೆ ಪ್ರತಿವಾದಿಯರ ಮನೆ

ಹಾಗೂ ಖುಲ್ಲಾ ಜಾಗದ ಪಶ್ಚಿಮಕ್ಕೆ ಅವರ ಸಹೋದರ ಶಂಕರ ಪಾಟೀಲ ರವರ ಮನೆ ಇರುತ್ತದೆ. ಪ್ರತಿವಾದಿಯರ ಮನೆ ಮತ್ತು ಜಾಗದ ಉತ್ತರ ದಿಕ್ಕಿಗೆ ಸಹದೇವ ಬಾಬು ಪಾಟೀಲ ರವರ ಮನೆ ಇರುತ್ತದೆ ಎಂದರೆ ಸರಿಯಲ್ಲ. ಪ್ರತಿವಾದಿಯರ ಮನೆ ಮತ್ತು ಖುಲ್ಲಾ ಜಾಗದ ಉತ್ತರ ಮತ್ತು ಪಶ್ಚಿಮ ದಿಕ್ಕಿಗೆ ಕಂಪೌಂಡ ಗೋಡೆ ಇರುತ್ತದೆ ಎಂದರೆ ಸರಿಯಲ್ಲ. ಪ್ರತಿವಾದಿಯರ ಮನೆ ಮತ್ತು ಖುಲ್ಲಾ ಜಾಗವನ್ನು ಸೇರಿಸಿ ಗ್ರಾಮ ಪಂಚಾಯತಿ ನಂಬರ 1/ಎ ಎಂದು ನೀಡಲಾಗಿದೆ ಎಂದರೆ ಸರಿಯಲ್ಲ. ಪ್ರತಿವಾದಿ 1982 ರಿಂದ ಇಲ್ಲಿಯವರೆಗೆ ಪಂಚಾಯತ ಕರಗಳನ್ನು ನೀಡುತ್ತಿದ್ದಾರೆ ಎಂದರೆ ಸರಿಯಲ್ಲ. ನಾನು ಮುಂದುವರೆದು ಹೇಳುತ್ತೇನೆ ಪ್ರತಿವಾದಿಯರು ಈಗ ಕರಪಾವತಿಯನ್ನು ಸೃಷ್ಟಿಸಿ ಹಾಜರುಪಡಿಸಿರುತ್ತಾರೆ. ಪ್ರತಿವಾದಿಯರು ಸದರಿ ಕರ ಪಾವತಿಗಳನ್ನು ಹಾಜರುಪಡಿಸಿರುತ್ತಾರೆ ಎಂದರೆ ಸರಿಯಲ್ಲ. ಪ್ರತಿವಾದಿಯರು ಸದರಿ ಕರ ಪಾವತಿಗಳನ್ನು ತಯಾರಿಸಿ ಹಾಜರುಪಡಿಸಿರುತ್ತಾರೆ. ಪ್ರತಿವಾದಿಯರು ಖೊಟ್ಟಿ ಕರಪಾವತಿಗಳನ್ನು ಸೃಷ್ಟಿಸಿದ್ದಾರೆ ಎಂದು ಹೇಳಿ ನಾನು ತಾಲ್ಲೂಕು ಪಂಚಾಯತಿಯಲ್ಲಿ ಮೇಲ್ಮನವಿಯನ್ನು ಸಲ್ಲಿಸಿಲ್ಲ. ನಾನು ಮುಂದುವರೆದು ಹೇಳುತ್ತೇನೆ ನಾನು ಈ ರೀತಿ ಮೇಲ್ಮನವಿ ಸಲ್ಲಿಸುವವನು ಇದ್ದೇನೆ.

4. ದಾವಾ ಆಸ್ತಿಯಲ್ಲಿ 1982 ರಿಂದ ಪ್ರತಿವಾದಿಯರ ಮನೆ ಹಾಗೂ ಖುಲ್ಲಾ ಜಾಗ ಇರುವುದು ಗ್ರಾಮಪಂಚಾಯತಿ ದಾಖಲೆಗಳಲ್ಲಿ ನೋಂದಣಿಯಾಗಿರುತ್ತದೆ ಎಂದರೆ ಸರಿಯಲ್ಲ. ನಾನು ಸದರಿ ಗ್ರಾಮಪಂಚಾಯತಿ ದಾಖಲೆಗಳು ತಪ್ಪಾಗಿವೆ ಎಂದು ನಾನು ತಾಲೂಕಾ ಪಂಚಾಯತಿಯಲ್ಲಿ ಮೇಲ್ಮನವಿಯನ್ನು ಸಲ್ಲಿಸಿಲ್ಲ. ನಾನು ಮುಂದುವರೆದು ಹೇಳುತ್ತೇನೆ ಸದರಿ ದಾಖಲೆಗಳು ಖೊಟ್ಟಿ ದಾಖಲೆಗಳಾಗಿರುವುದರಿಂದ ನಾನು ಮೇಲ್ಮನವಿ ಸಲ್ಲಿಸುವವನು ಇದ್ದೇನೆ. ಗ್ರಾಮಪಂಚಾಯತಿ ದಾಖಲೆಗಳಲ್ಲಿ ಪ್ರತಿವಾದಿಯರು ಮಾಲೀಕ ಮತ್ತು ಕಬ್ಜಾದಾರ

ಎಂದು ಉಲ್ಲೇಖ ಇರುತ್ತದೆ ಎಂದರೆ ಸರಿಯಲ್ಲ. ಪಿ ಡಿ ಓ ರವರು ದಾವಾ ಆಸ್ತಿಯ ಸ್ಥಳ ಪರಿಶೀಲನೆ ಮಾಡಿ ಹಾಗೂ ದಾವಾ ಆಸ್ತಿಯ ಮಾಲಿಕತ್ವದ ದಾಖಲೆಗಳನ್ನು ನೋಡಿಪ್ರತಿವಾದಿಯರು ದಾವಾ ಆಸ್ತಿ ಯ ಸ್ವಾಧಿನದಲ್ಲಿದ್ದಾರೆ ಹಾಗೂ ಮಾಲೀಕರಾಗಿದ್ದಾರೆ ಎಂದು ಖಾತರಿಪಡಿಸಿಕೊಂಡು ಗ್ರಾಮಪಂಚಾಯತಿ ದಾಖಲೆಗಳಲ್ಲಿ ಪ್ರತಿವಾದಿಯರ ಹೆಸರನ್ನು ದಾಖಲಿಸಿದ್ದಾರೆ ಎಂದರೆ ಸರಿಯಲ್ಲ. ನಾನು ಮುಂದುವರೆದು ಹೇಳುತ್ತೇನೆ ಅವು ಖೊಟ್ಟಿ ಇರುತ್ತವೆ. ಪ್ರತಿವಾದಿಯರು ತಮ್ಮ ಉದಾಹರಣೆ(written statement) ಜೊತೆಗೆ ಹಾಜರುಪಡಿಸಿರುವ hand sketch ನ್ನು ನೋಡಿರುತ್ತೇನೆ ಆದರೆ ಅದು ಸರಿ ಇರುವುದಿಲ್ಲ. ಪ್ರತಿವಾದಿಯರ ಮನೆ ಮತ್ತು ಖುಲ್ಲಾ ಜಾಗ ಸರ್ವೇ ನಂಬರ 22/2 ನ್ನು ಹೊರತು ಪಡಿಸಿ ಬೇರೆ ಸರ್ವೇ ನಂಬರದಲ್ಲಿ ಬರುತ್ತದೆ ಎನ್ನುವ ಕುರಿತಾಗಿ ಬೇರೆ ದಾಖಲೆ ಇಲ್ಲ. ನಾನು ಸ್ವತಃ ಹೇಳುತ್ತೇನೆ ಪ್ರತಿವಾದಿಯರ ಮನೆ ಮತ್ತು ಖುಲ್ಲಾ ಜಾಗ ಬೇರೆ ಸರ್ವೇ ನಂಬರನಲ್ಲಿ ಬರುತ್ತದೆ. ಪ್ರತಿವಾದಿಯರ ಮನೆ ಮತ್ತು ಖುಲ್ಲಾ ಜಾಗ ಬೇರೆ ಸರ್ವೇ ನಂಬರನದಲ್ಲಿ ಬರುತ್ತದೆ ಎಂದು ತೋರಿಸಲು ನಾನು ನ್ಯಾಯಾಲಯದಲ್ಲಿ ಯಾವುದೇ ದಾಖಲೆಯನ್ನು ಹಾಜರುಪಡಿಸಿಲ್ಲ. ದಾವಾ ಆಸ್ತಿಯ ಸುತ್ತಮುತ್ತಲು ಈಗ ಸುಮಾರು 100-200 ಮನೆಗಳು ಇವೆ ಎಂದರೆ ಸರಿ. ನಾನು ಮುಂದುವರೆದು ಹೇಳುತ್ತೇನೆ ಈ ರೀತಿ ಮನೆಗಳು ಈ ಮೊದಲು ಇರಲಿಲ್ಲ ಇತ್ತೀಚೆಗೆ ನಿರ್ಮಾಣವಾಗಿರುತ್ತವೆ. ಸದರಿ ಮನೆಗಳು ಇತ್ತೀಚೆಗೆ ಯಾವ ವರ್ಷದಲ್ಲಿ ನಿರ್ಮಾಣವಾಗಿವೆ ಎಂದು ನನಗೆ ಹೇಳಲು ಬರುವುದಿಲ್ಲ. ದಾವಾ ಆಸ್ತಿ ಕೃಷಿ ಜಮೀನು ಹೌದು ಅಲ್ಲವೋ ಎಂದು ತೋರಿಸಲು ಕಮಿಷನ ಅರ್ಜಿ ಸಲ್ಲಿಸಿದರೆ ನನ್ನ ತಕರಾರು ಇರುವುದಿಲ್ಲ. ದಾವಾ ಆಸ್ತಿ ಯಲ್ಲಿ ಮನೆ ಮತ್ತು ಖುಲ್ಲಾ ಜಾಗದಲ್ಲಿ 1981 ನೇ ಇಸ್ವಿಯಿಂದಲೂ ಸಹ ಪ್ರತಿವಾದಿಯರು ಮಾಲೀಕತ್ವ ಹೊಂದಿದ್ದಾರೆ ಹಾಗೂ ನಿರಾಂತಕ ಕಬ್ಜಾದಲ್ಲಿದ್ದಾರೆ ಎಂದರೆ ಸರಿಯಲ್ಲ. ನಾನು ಮುಂದುವರೆದು ಹೇಳುತ್ತೇನೆ ನನ್ನ ತಂದೆ

ಯಾವುದೇ ಜಮೀನನ್ನು ಯಾರಿಗೂ ಮಾರಿಲ್ಲ. 1981 ರಿಂದ ಇಲ್ಲಿಯವರೆಗೂ ದಾವಾ ಆಸ್ತಿಯ ರೇವಿನ್ಯೂ ಕಂದಾಯ ನೀಡಿದ ಕುರಿತಾಗಿ ಕರ ಪಾವತಿಗಳನ್ನು ಹಾಜರುಪಡಿಸಿರುತ್ತೇನೆ. ನಿಶಾನೆ ಪಿ 4 ಮತ್ತು 5 ರಲ್ಲಿ ಸರ್ವೇ ನಂಬರ ಉಲ್ಲೇಖಿಸಿಲ್ಲ ಎಂದರೆ ಖಾತಾ ನಂಬರ ಉಲ್ಲೇಖಿಸಿದೆ. ನಿಶಾನೆ ಪಿ 4 ಮತ್ತು 5 ನ್ನು ನೀಡುವ ಕಾಲಕ್ಕೆ ಕಲ್ಲಪ್ಪಾ ಮಹಾದೇವ ಪಾಟೀಲ ರವರು ಸರ್ವೇ ನಂಬರ 22/2 ರ ಮಾಲೀಕರಾಗಿರಲಿಲ್ಲ ಎಂದರೆ ಸರಿಯಲ್ಲ. ಸನ್ 2011 ನೇ ಇಸ್ವಿಯಲ್ಲಿ ಸರ್ವೇ ನಂಬರ 22/2 ಕ್ಕೆ ನನ್ನ ಹೆಸರು ದಾಖಲಾಗಿರುವುದಿಲ್ಲ ಎಂದರೆ ಸರಿ. ನಾನು ಮುಂದುವರೆದು ಹೇಳುತ್ತೇನೆ ನಂತರ ನನ್ನ ಹೆಸರು ದಾಖಲಾಗಿರುತ್ತದೆ.

4. ದಿನಾಂಕ 25.01.2018 ನೇ ಇಸ್ವಿಯಲ್ಲಿ ಮಾನ್ಯ ಜಿಲ್ಲಾ ನ್ಯಾಯಾಲಯದವರು ಪ್ರೊಬೇಟ್ ಸರ್ಟಿಪಿಕೇಟನ್ನು ನೀಡಿದ ಬಳಿದ ನನ್ನ ಹೆಸರು ಸರ್ವೇ ನಂಬರ 22/2 ರ ಕಂದಾಯ ದಾಖಲಾತಿಗಳಲ್ಲಿ ದಾಖಲಾಗಿರುತ್ತದೆ ಎಂದರೆ ಸರಿಯಲ್ಲ. ನಾನು ಮುಂದುವರೆದು ಹೇಳುತ್ತೇನೆ ಅದಕ್ಕಿಂತ ಮೊದಲು ಕಂದಾಯ ದಾಖಲಾತಿಗಳಲ್ಲಿ ನನ್ನ ಹೆಸರು ದಾಖಲಾಗಿರುತ್ತದೆ. ನಾನು ನನ್ನ ಹೆಸರು ಸರ್ವೇ ನಂಬರ 22/2 ರ ಕಂದಾಯ ದಾಖಲಾತಿಯಲ್ಲಿ 2018 ಕ್ಕಿಂತ ಮೊದಲು ದಾಖಲಾಗಿದೆ ಎಂದು ತೋರಿಸಲು ಯಾವುದೇ ದಾಖಲಾತಿಯನ್ನು ಹಾಜರುಪಡಿಸಿಲ್ಲ ಎಂದರೆ ಸರಿಯಲ್ಲ. ಪ್ರತಿವಾದಿಯರು ಮನೆ ಕಟ್ಟಿದ್ದಾರೆ ಎಂದು ಹಾಗೂ ಖುಲ್ಲಾ ಜಾಗವನ್ನು ತೋರಿಸಲು ಪೋಟೋಗಳನ್ನು ಹಾಜರುಪಡಿಸಿದ್ದಾರೆ ಎಂದರೆ ಸರಿ. ನಾನು ಮುಂದುವರೆದು ಹೇಳುತ್ತೇನೆ ಅವು ಖೊಟ್ಟಿ ಇರುತ್ತವೆ. ದಾವಾ ಆಸ್ತಿಯಲ್ಲಿ ಮನೆ ಇಲ್ಲ ಎಂದು ತೋರಿಸಲು ನನ್ನ ಬಳಿ ಯಾವುದೇ ದಾಖಲೆ ಇಲ್ಲ ಎಂದರೆ ದಾವಾ ಆಸ್ತಿಯ ಕುರಿತಾಗಿ ನನ್ನ ಬಳಿ ರೆಕಾರ್ಡ ಆಫ್ ರೈಟ್ಸ ಇರುತ್ತದೆ. ಈಗ ನಾನು ನೋಡುತ್ತಿರುವ ದಾಖಲೆ ನನ್ನ ಅಜ್ಜ ಕಲ್ಲಪ್ಪಾ ಮಹಾದೇವ ಪಾಟೀಲ ರವರು ತನ್ನ ಹೆಸರನ್ನು

ಜಮೀನುಗಳಲ್ಲಿ ಕಡಿಮೆ ಮಾಡಿ ನನ್ನ ತಂದೆಯಾದ ವೈಜು ಪಾಟೀಲ ರವರ ಹೆಸರನ್ನು ದಾಖಲು ಮಾಡಬೇಕೆಂದು ದಿನಾಂಕ 05.09.2000 ರಂದು ನೀಡಿರುವ ದಾಖಲೆ ಪತ್ರ ಎಂದರೆ ಸರಿ. ಸಾಕ್ಷಿಯು ಅದನ್ನು ನೋಡಿ ಗುರುತಿಸಿದ್ದರಿಂದ ಅದನ್ನು ನಿಶಾನೆ ಡಿ 1 ಎಂದು ಗುರುತಿಸಲಾಯಿತು. ಸದರಿ ನಿಶಾನೆ ಡಿ 1 ದಾಖಲೆ ಪತ್ರಕ್ಕೆ ಮೂಲ ಪ್ರತಿಗೆ ನನ್ನ ಅಜ್ಜ ಹಾಗೂ ನನ್ನ ತಂದೆ ಸಹಿ ಮಾಡಿರುತ್ತಾರೆ. ನಿಶಾನೆ ಡಿ 1 ದಾಖಲೆ ಪತ್ರಿಕೆ ಆಧಾರದ ಮೇಲೆ ಉಪತಹಶೀಲ್ದಾರ ರವರು ದಿನಾಂಕ 18.10.2001 ರಂದು ನನ್ನ ತಂದೆ ಹೆಸರನ್ನು ಸದರಿ ಆಸ್ತಿಗಳ ಕುರಿತಾಗಿ ದಾಖಲಿಸಲು ಆದೇಶ ಮಾಡಿರುತ್ತಾರೆ ಎಂದರೆ ಮಾಡಿರಬಹುದು. ಈಗ ನಾನು ನೋಡುತ್ತಿರುವ ದಾಖಲೆ ಉಪತಹಶೀಲ್ದಾರ ರವರ ಆದೇಶದ ದೃಡೀಕೃತ ನಕಲು ಆಗಿರುತ್ತದೆ ಎಂದರೆ ಸರಿ. ಸಾಕ್ಷಿಯು ಅದನ್ನು ನೋಡಿ ಗುರುತಿಸಿದ್ದರಿಂದ ಅದನ್ನು ನಿಶಾನೆ ಡಿ 2 ಎಂದು ಗುರುತಿಸಲಾಯಿತು. ಈಗ ನಾನು ನೋಡುತ್ತಿರುವ ದಾಖಲೆ ನಿಶಾನೆ ಡಿ 2 ರ ಆಧಾರದ ಮೇಲೆ ಡೈರಿ ನಂಬರ 10350 ಮಂಜೂರಿ ಆಗಿ ದಾಖಲಾಗಿರುವ ಹಕ್ಕಿನ ಪತ್ರಿಕೆ ಆಗಿರುತ್ತದೆ ಎಂದರೆ ಸರಿ. ಸಾಕ್ಷಿಯು ಅದನ್ನು ನೋಡಿ ಗುರುತಿಸಿದ್ದರಿಂದ ಅದನ್ನು ನಿಶಾನೆ ಡಿ 3 ಎಂದು ಗುರುತಿಸಲಾಯಿತು. ನಿಶಾನೆ ಡಿ 3 ರಲ್ಲಿ 2-3 ಸರ್ವೇ ನಂಬರಗಳು ದಾಖಲಾಗಿಲ್ಲ. ಸದರಿ ನಂಬರಗಳನ್ನು ನನಗೆ ಹೇಳಲು ಬರುವುದಿಲ್ಲ.

**ಈ ಹಂತದಲ್ಲಿ ಮುಂದುವರೆದ ಸಾಕ್ಷಿಯ ಪಾಟೀ ಸವಾಲಿಗೆ ಸಮಯವಕಾಶ ಕೋರಿದ್ದು ನೀಡಲಾಯಿತು.**

**(ಸಾಕ್ಷಿಯ ಹೇಳಿಕೆಯನ್ನು ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು)**

**ಓ.ಹೇ.ಕೇ ಸರಿಯಿದೆ.**

**sd/-**

**ಪ್ರಧಾನ ಸಿವಿಲ್ ಮತ್ತು ಜೆ.ಎಂ.ಎಫ್.ಸಿ ನ್ಯಾಯಾಧೀಶರು,**
**ಬೆಳಗಾವಿ.**